ಸಾಕ್ಷಿಯನ್ನು ದಿಃ**13.02.2024** ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು**.**

ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ**.**ಬಿ**.**ಎಸ್**.**ಆರ್**.** ವಕೀಲರಿಂದ**:**

ನಾನು ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆಃ

**1.** ದಿನಾಂಕಃ15.05.2002 ರ ಪಂಚಾಯಿತಿ ವಿಭಾಗ ಪತ್ರವನ್ನು ನಿಪಿ**.15** ಎಂದು ಗುರುತಿಸಲಾಗಿದೆ. ಸಾಕ್ಷಿಯು ನಿಪಿ.15 ರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ**.15(**ಎ**)** ಎಂದು ಗುರುತಿಸಲಾಗಿದೆ. ನಿಪಿ.15 ಕ್ಕೆ ಲಿಂಗಯ್ಯ, ಸಿದ್ದರಾಮಶೆಟ್ಟಿ ಮತ್ತು ನಾರಾಯಣ ಎಂಬುವವರು ಸಹಿ ಮಾಡಿರುತ್ತಾರೆ. ಗಂಗಾಧರಯ್ಯರವರು ಪತ್ರವನ್ನು ಬರೆದಿರುತ್ತಾರೆ. ಸದರಿ ವಿಭಾಗವು ನನ್ನ ಅಣ್ಣ ಮಹಮ್ದು ಗೌಸ, ತಾಜಪೀರ, ನನ್ನ ತಾಯಿ ಮತ್ತು ನನ್ನ ನಡುವೆ ಆಗಿರುತ್ತದೆ. ಸದರಿಯವರು ತಮ್ಮ ಸಹಿಯನ್ನು ಸಹ ಹಾಕಿರುತ್ತಾರೆ. ನನ್ನ ತಾಯಿಯವರು ಹೆಬ್ಬಟ್ಟಿನ ಗುರುತನ್ನು ಹಾಕಿರುತ್ತಾರೆ. ಸಾಕ್ಷಿಯು ಸದರಿ ಸಹಿಗಳನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ**.15(**ಬಿ**)** ಮತ್ತು ನಿಪಿ**.15(**ಸಿ**)** ಎಂದು ಗುರುತಿಸಲಾಗಿದೆ. ಸಾಕ್ಷಿಯು ಸಾಕ್ಷಿದಾರರ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲಿಗೆ ಸಮಯ ಕೋರಿದ್ದು**,** ಸಮಯ ನೀಡಲಾಯಿತು.

*( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)*

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ .
ಕುಣಿಗಲ್.